***OS 142/2015 PW -1***

ದಿನಾಂಕಃ 18-01-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋಧಿಸಲಾಯಿತು.

*ಮುಂದುವರೆದ ಪಾಟೀ ಸವಾಲುಃಃಪ್ರತಿ ವಾದಿ ಪರ ವಕೀಲರಾದ ಶ್ರೀ AV ರವರಿಂದ*

4. ನಾನು ಒಂದನೇ ಪ್ರತಿವಾದಿ ಜೊತೆ ವಾಸ ಮಾಡುತ್ತಿದ್ದೆ ಎಂದು ತೋರಿಸುವ ಸಲುವಾಗಿ ನ್ಯಾಯಾಲಯಕ್ಕೆ ವಂಶವೃಕ್ಷ ಹಾಗೂ ಫೋಟೋವನ್ನು ಹಾಜರುಪಡಿಸಿರುತ್ತೇನೆ. 1 ನೇ ಪ್ರತಿವಾದಿ 1 ನೇ ಹೆಂಡತಿ ಗಂಗಮ್ಮನ ಮಕ್ಕಳು ಬ್ರಹ್ಮಾನಂದರೆಡ್ಡಿ ಮತ್ತು ಬಾಸ್ಕರ ರೆಡ್ಡಿ ರವರು ಯಾವಾಗ ತೀರಿಕೊಂಡಿರುತ್ತಾರೆ ಎಂಬುದರ ಬಗ್ಗೆ ನನ್ನ ವಾದ ಪತ್ರದಲ್ಲಿ ತಿಳಿಸಿದರುವುದಿಲ್ಲ, ನಿಪಿ -1 ರಲ್ಲಿ ಕಾಣಿಸಿರುತ್ತೇನೆ. ಆಂಧ್ರದಲ್ಲಿ ನಾನು ಮತ್ತು ನನ್ನ ತಾಯಿ ವಾಸ ಮಾಡುತ್ತಿದ್ದು ನಮಗೆ ಸೇರಿದ ದಾಖಲೆಗಳು ಆಂಧ್ರದಲ್ಲಿ ಇರುತ್ತವೆ ಎಂದರೆ ಈ ದಾವೆಯನ್ನು ಸಲ್ಲಿಸುವ ಮೊದಲು ನಾವು ಕಡೇಹಳ್ಳಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದು ನಂತರ ಮದ್ದಲಹಳ್ಳಿ ಗ್ರಾಮಕ್ಕೆ ಹೋಗಿರುತ್ತೇವೆ. ನಮ್ಮ ತಾಯಿ ಸಲ್ಲಿಸಿದ ಜೀವನಾಂಶ ಪ್ರಕರಣದಲ್ಲಿ 1 ನೇ ಪ್ರತಿವಾದಿ ಜೈಲಿಗೆ ಹೋಗಿದ್ದರು ಎಂದರೆ ಸರಿ. 1 ನೇ ಪ್ರತಿವಾದಿ ಹಾಗೂ ನನ್ನ ತಾಯಿ ಗಂಗಮ್ಮನವರ ಹೆಸರಿನಲ್ಲಿರುವ ಆಧಾರ್ ಕಾರ್ಡ್ ಆಂಧ್ರದ ವಿಳಾಸದಲ್ಲಿರುತ್ತದೆ, ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸ ಬಲ್ಲೆ. ನಾನು 1 ನೇ ಪ್ರತಿವಾದಿ ಹಾಗೂ ನನ್ನ ತಾಯಿಯನ್ನು ಪಾಲನೆ ಮಾಡುತ್ತಿರುತ್ತೇನೆ ಎಂದು ನನ್ನ ವಾದ ಪತ್ರದಲ್ಲಿಕಾಣಡಿಸಿರುತ್ತೇನೆ . 1 ನೇ ಪ್ರತಿವಾದಿ ಕೂಲಿ ಮಾಡಿ ಜೀವನ ಮಾಡಲಾಗುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಭಾಗ ಪಡೆಯುವ ಸಲುವಾಗಿ ನನ್ನ ತಾಯಿ ಮತ್ತು ನಾನು ಸೇರಿ ಹಿಂದುಾಪುರ ನ್ಯಾಯಾಲಯದಲ್ಲಿ 1 ನೇ ಪ್ರತಿವಾದಿ ವಿರುದ್ಧ ಜೀವನಾಂಶ ಪ್ರಕರಣ ದಾಖಲು ಮಾಡಿ 1 ನೇ ಪ್ರತಿವಾದಿಯನ್ನು ಜೈಲಿಗೆ ಕಳುಹಿಸಿರುತ್ತೇವೆ ಎಂದರೆ ಸರಿಯಲ್ಲ.

5. ಒಂದನೇ ಪ್ರತಿವಾದಿ ತನ್ನ ಪ್ರತಿವಾದ ಪತ್ರದಲ್ಲಿ ನಾನು ಅವರ ಮಗನಲ್ಲ , ನನ್ನ ತಾಯಿ 1 ನೇ ಪ್ರತಿವಾದಿ ಜೊತೆ 2 ತಿಂಗಳು ಸಹ ಸಂಸಾರ ಮಾಡಿರುವುದಿಲ್ಲ, ಆಂಧ್ರಕ್ಕೆ ಹೊರಟು ಹೋಗಿರುತ್ತಾರೆ ಎಂದು ಕಾಣಿಸಿರುತ್ತಾರೆ ಎಂದರೆ ಸರಿ, ಅದು ಆ ರೀತಿ ಸುಳ್ಳಾಗಿ ಬರೆಸಿರುತ್ತಾರೆ. ಪ್ರತಿವಾದ ಪತ್ರ ಸಲ್ಲಿಸಿದ ನಂತರ ನನ್ನ ತಾಯಿ ಜೀವನಾಂಶಕ್ಕಾಗಿ ಹಿಂದೂಪುರ ನ್ಯಾಯಾಲಯದಲ್ಲಿ ಜೀವನಾಂಶ ಪ್ರಕರಣ ಸಲ್ಲಿಸಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿ ಹಾಗೂ ಅವರ ಹೆಂಡತಿ ಆಂಜಿನಮ್ಮನವರು ಮಾತ್ರ ಕಡೇಹಳ್ಳಿಯಲ್ಲಿ ವಾಸ ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ, 2 ಮತ್ತು 3 ನೇ ಪ್ರತಿವಾದಿಗಳು ವಾಸ ಮಾಡುತ್ತಿರುತ್ತಾರೆ. 2 ನೇ ಪ್ರತಿವಾದಿಯು ಪಾರ್ಶವಾಯು ಖಾಯಿಲಿಗೆ ತುತ್ತಾಗಿರುತ್ತಾರೆ ಎಂದರೆ ಸರಿ. ನಂತರ 2 ನೇ ಪ್ರತಿವಾದಿ ಹೆಂಡತಿ ಮಕ್ಕಳು ಅವರನ್ನು ಬಿಟ್ಟು ಹೊರಟು ಹೋಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿ ಬೆಂಗಳೂರಿನಿಂದ ಕಡೇಹಳ್ಳಿಗೆ ಬಂದು ಹೋಗುತ್ತಿರುತ್ತಾರೆ.

6. ದಾವಾ 5 ನೇ ಆಸ್ತಿಯು ನನ್ನ ಅಜ್ಜಿ ಲಕ್ಷ್ಮಮ್ಮನವರಿಗೆ ಸೇರಿದಂತಹ ಆಸ್ತಿಯಾಗಿರುತ್ತದೆ. ಸದರಿ ಲಕ್ಷ್ಮಮ್ಮನವರ ತಾಯಿ ಹೆಸರು ಆದೆಕ್ಕ ಎಂದರೆ ಸರಿ. ದಾವಾ 5 ನೇ ಆಸ್ತಿಯು ಲಕ್ಷ್ಮಮ್ಮನವರಿಗೆ ಅವರ ತವರು ಮನೆ ಕಡೆ ಇಂದ ಬಂದಂತಹ ಆಸ್ತಿಯಾಗಿರುತ್ತದೆ ಎಂದರೆ ಸರಿ. ಲಕ್ಷ್ಮಮ್ಮನವರು 2, 3 ನೇ ಪ್ರತಿವಾದಿಗಳು ಹಾಗೂ ಗಂಗಿರೆಡ್ಡಿ ರವರ ಹೆಂಡತಿ ಈಶ್ವರಮ್ಮನವರಿಗೆ 1 ಎಕರೆ 30 ಗುಂಟೆ ಹಾಗೂ ಆದಿರೆಡ್ಡಿರವರಿಗೆ 30 ಗಂಟೆ ಜಮೀನಿಗೆ ಸಂಬಂದಿಸಿದಂತೆ ದಿನಾಂಕ 30-10-2016 ರಲ್ಲಿ ವಿಲ್ ಪತ್ರವನ್ನು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಅ ಬಗ್ಗೆ ಪ್ರತಿವಾದಿಗಳು ಅವರ ಪ್ರತಿವಾದ ಪತ್ರದಲ್ಲಿ ತಿಳಿಸಿರುತ್ತಾರೆ ಎಂದರೆ ಸುಳ್ಳಾಗಿ ತಿಳಿಸಿರುತ್ತಾರೆ. ಈಶ್ವರಮ್ಮನವರು 1 ನೇ ಪ್ರತಿವಾದಿಯ ತಂಗಿ ಎಂದರೆ ಸರಿಯಲ್ಲ.

ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(<u>ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಗಣಕೀಕೃತಗೊಳಿಸಲಾಯಿತು</u>)

ಓ.ಹೇ.ಕೇ.ಸ.ಇದೆ.

ಸಿ ಜೆ ಮತ್ತು ಜೆ ಎಂ ಎಫ್ ಸಿ,
ಗುಡಿಬಂಡೆ,